# ಅಜ್ಜಿಯ ಕಸರತ್ತು!

ಜರ್ಮನಿ ದೇಶದ ಜೊಹನ್ನಾ ಕ್ವಾಸ್ ಅವರನ್ನು ನೋಡಿದರೆ ಹರೆಯದವರೆಲ್ಲ ಕರುಬುವುದು ಖಂಡಿತ. ಮಡೊನ್ನಾ ಕೂಡ ನಾಚಿಕೊಳ್ಳುವ ಅಂಗಸೌಷ್ಟವ ಈಕೆಯದು. ಅಂದ ಹಾಗೆ ಈಕೆಯ ವಯಸ್ಸೆಷ್ಟು ಗೊತ್ತೇ? ಬರೋಬ್ಬರಿ 86 ವರ್ಷ. ಇಂಥ ಇಳಿ ವಯಸ್ಸಿನಲ್ಲೂ ಈಕೆ ಮಾಡುವ ಜಿಮ್ನಾಸ್ಟಿಕ್ ನೋಡಿದರೆ ಯಾರಾದರೂ ನಿಬ್ಬೆರಗಾಗುತ್ತಾರೆ.

ಇತ್ತೀಚೆಗೆ ಜರ್ಮನಿಯಲ್ಲಿ ನಡೆದ ಕಾಟ್ಬಸ್ ವರ್ಲ್ಡ್ ಕಪ್–2012ರಲ್ಲಿ ಜೊಹನ್ನಾ ತನ್ನ ಕಸರತ್ತನ್ನು ತೋರಿಸುತ್ತಿದ್ದಾಗ ಪ್ರೇಕ್ಷಕರ ಶಿಳ್ಳೆ, ಚಪ್ಪಾಳೆಗಳು ಮುಗಿಲು ಮುಟ್ಟಿದ್ದವಂತೆ. ನೆಲದ ಮೇಲೆ ಹಾಗೂ ಸಮಾನಾಂತರ ಬಾರ್‌ಗಳ ಮೇಲೆ ಈಕೆಯ ಪ್ರತೀ ಭಂಗಿಗಳನ್ನು ನೋಡುತ್ತಿದ್ದ ಯುವ ಜಿಮ್ನಾಸ್ಟಿಕ್‌ಗಳಂತೂ ಅತ್ಯಾಶ್ಚರ್ಯಗೊಂಡರಂತೆ.

ಯೂ ಟ್ಯೂಬ್‌ನಲ್ಲಿ 30 ಲಕ್ಷಕ್ಕಿಂತ ಹೆಚ್ಚು ಜನ ಈಕೆಯ ಜಿಮ್ನಾಸ್ಟಿಕ್ ಅನ್ನು ವೀಕ್ಷಣೆ ಮಾಡಿ ಸಂತಸ ಪಟ್ಟಿದ್ದಾರಂತೆ. ಅಂದ ಹಾಗೆ ಈ ಅಲ್ಟ್ರಾ ಫ್ಲೆಕ್ಸಿಬಲ್ ಮಹಿಳೆ, ಜಿಮ್ನಾಸ್ಟಿಕ್ ಅನ್ನು ಪ್ರಾರಂಭಿಸಿದ್ದು ತನ್ನ 30 ನೇ ವಯಸ್ಸಿನಲ್ಲಿ. ಐವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಈಕೆ, ಅನೇಕ ಯುವ ಪ್ರತಿಸ್ಪರ್ಧಿಗಳ ಹೃದಯವನ್ನು ಗೆದ್ದಿದ್ದಾಳೆ. ಕಲಾತ್ಮಕ ಜಿಮ್ನಾಸ್ಟಿಕ್‌ನಲ್ಲಿ ಈಕೆ ಹಲವು ಬಾರಿ ಸೀನಿಯರ್ ಚಾಂಪಿಯನ್ ಆಗಿದ್ದಾರೆ. ತನ್ನ ವಯಸ್ಸಿನ ಕಾಲುಭಾಗ ವಯಸ್ಸಿನವರು ಅಂದರೆ 20 ವರ್ಷ ವಯಸ್ಸಿನವರು ಮಾಡುವ ಜಿಮ್ನಾಸ್ಟಿಕ್ ರೊಟೀನ್ ವಿತ್ ಬ್ಯಾಲೆನ್ಸ್, ಸ್ಟ್ರೆಂತ್, ಫ್ಲೆಕ್ಸಿಬಿಲಿಟಿ ಎಲ್ಲವೂ ಬಿಳಿ ಗುಂಗುರು ಕೂದಲಿನ ಈ ಅಜ್ಜಿಗೆ ಬಲು ಸಲೀಸು.

ಕಳೆದ 30 ವರ್ಷಗಳಲ್ಲಿ ಜೊಹನ್ನಾ, 11 ವಿಶ್ವ ಚಾಂಪಿಯನ್‌ಗಳನ್ನು ತನ್ನದಾಗಿರಿಸಿಕೊಂಡಿದ್ದಾರೆ. ಜಿಮ್ನಾಸ್ಟಿಕ್ ತರಬೇತಿ ನೀಡಿದ ಜರ್ ಹಾರ್ಡ್ ಕ್ವಾಸ್ ಅನ್ನು 1963 ರಲ್ಲಿ ಮದುವೆ ಮಾಡಿಕೊಂಡ ಈಕೆಗೆ 3 ಹೆಣ್ಣು ಮಕ್ಕಳಿದ್ದಾರೆ. ದಿನಾ ಮಾಡುವ ಕಟ್ಟುನಿಟ್ಟಿನ ವ್ಯಾಯಾಮ, ಓಟ ಹಾಗೂ ಯೋಗವೇ ಈಕೆಯ ದೇಹಸಿರಿಯ ಒಳಗುಟ್ಟಂತೆ. "ಗಿನ್ನೆಸ್ ವಿಶ್ವ ದಾಖಲೆಯಲ್ಲಿ ನನ್ನ ಹೆಸರು ಸೇರ್ಪಡೆಯಾಗಿರುವುದಕ್ಕೆ ಬಲು ಹೆಮ್ಮೆ ಎನಿಸುತ್ತದೆ" ಎನ್ನುತ್ತಾರೆ ಜೊಹನ್ನಾ ಕ್ವಾಸ್.

■ ವಿದ್ಯಾ ಹಾಲಭಾವಿ



